*

**ಓಎಸ್ ನಂಃ 21/2020**
**ಪಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 26-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ.ಪಿ.ವಿ.ಡಿ. ವಕೀಲರಿಂದ</u>

1ನೇ ವಾದಿ ನನ್ನ ತಾಯಿಯಾಗಿದ್ದು ಅವರು ಯರಗಾಲ್ ಗ್ರಾಮದ ನಿವಾಸಿಯಾಗಿರುತ್ತಾರೆ. 1ನೇ ವಾದಿ ನ್ಯಾಯಾಲಯಕ್ಕೆ ಬಂದು ತನ್ನ ಸಾಕ್ಷ್ಯವನ್ನು ಕೊಡುತ್ತಾರಾ ಎಂದರೆ ಸಾಕ್ಷಿ ಅವಶ್ಯಕತೆ ಬಿದ್ದರೆ ಕೊಡುತ್ತಾರೆ ಎಂದು ನುಡಿಯುತ್ತಾರೆ. 1ನೇ ವಾದಿ ಮೃತ ಶಿವಯೋಗಿ ಇವರ ಮೊದಲನೇ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ನೀವು, 3 ಮತ್ತು 4ನೇ ವಾದಿಯರು ಮೃತ ಶಿವಯೋಗಿಯ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಮತ್ತು ಮೃತ ಶಿವಯೋಗಿ ಇವರ ಮದುವೆ ದಿಃ 25.05.1995ರಲ್ಲಿ ಯರಗಾಲ್ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಶಿವಯೋಗಿ ಇವರು KNNL ಇಲಾಖೆಯಲ್ಲಿ JE ಆಗಿ ಕೆಲಸ ಮಾಡುತ್ತಿದ್ದರು. ಮೃತ ಶಿವಯೋಗಿ ಇವರು ತಮ್ಮ Service Register ನಲ್ಲಿ 1ನೇ ಪ್ರತಿವಾದಿಯನ್ನು Nominee ಆಗಿ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ Nominee ಆಗಿ ಮೃತ ಶಿವಯೋಗಿ ಇವರ Service Register ನಲ್ಲಿ ನಮೂದಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಶಿವಯೋಗಿ ಇವರು ತೀರಿಕೊಂಡ ನಂತರ ಊರನಲ್ಲಿ ಪಂಚಾಯತಿಯಾಗಿ ನಿಮಗೆ Compensatory Job ನಿಮಗೆ ಕೊಟ್ಟು 1ನೇ ಪ್ರತಿವಾದಿಗೆ Service Benifit ಕೊಡಬೇಕೆಂದು ರಾಜಿ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಒಪ್ಪಿಗೆ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ 1ನೇ ವಾದಿಯ ಭಾವಚಿತ್ರವನ್ನು ನೋಡಿ ಗುರುತಿಸಿದ ಕಾರಣ ಸದರಿ ಒಪ್ಪಿಗೆ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಕೇವಲ 1ನೇ ವಾದಿಯ ಭಾವಚಿತ್ರವಿದ್ದು ದಾಖಲೆ ಸುಳ್ಳಾಗಿ ತಯಾರಿಸಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ವಾದ ಪತ್ರವನ್ನು ತೋರಿಸಿ ಅದರಲ್ಲಿರುವ ಸಹಿ 1ನೇ ವಾದಿಗೆ ಸೇರಿದ್ದು ಎಂದು ಕೇಳಿದಾಗ ಸಾಕ್ಷಿ ಸದರಿ ಸಹಿಯು 1ನೇ ವಾದಿಗೆ ಸೇರಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವಾಗ 1ನೇ ವಾದಿ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿ

ಸುಳ್ಳು ಎಂದು ನುಡಿಯುತ್ತಾರೆ. ಪಂಚಾಯತಿಯಲ್ಲಿ ರಾಜಿ ಆಗಿದ್ದರೂ ಸಹ ಈಗ 1ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಮೃತ ಶಿವಯೋಗಿಯವರ Death Benefits ನಲ್ಲಿ ನಿಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಮೃತ ಶಿವಯೋಗಿಯ 1ನೇ ಹೆಂಡತಿ ಅಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 2ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.